ತಾಂತ್ರಿಕ ಶಿಕ್ಷಣ ಇಲಾಖೆಯ ನಡವಳಿಗಳು

ವಿಷಯ: ಶ್ರೀ ಬಿ.ವಿ.ಜಯಂತ್, ಬೋಧಕರು, ಸರ್ಕಾರಿ ಎಲ್.ವಿ.ಪಾಲಿಟೆಕ್ನಿಕ್, ಹಾಸನ (ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ) ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಅಮಾನತ್ತುಗೊಳಿಸುವ ಬಗ್ಗೆ

**ಓದಲಾಗಿದೆ:**

1) ಸರ್ಕಾರದ ಪತ್ರ ಸಂ: ಇಡಿ 237 ಟಿಪಿಇ 2012, ದಿನಾಂಕ: 29-9-2012

**ಪ್ರಸ್ತಾವನೆ:**

ಸರ್ಕಾರಿ ಶ್ರೀಮತಿ ಎಲ್.ವಿ. ಪಾಲಿಟೆಕ್ನಿಕ್, ಹಾಸನದಲ್ಲಿ ಬೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಿ.ವಿ.ಜಯಂತ್, ಇವರು ದಿನಾಂಕ: 14-9-2012 ರಂದು ಘನತೆವೆತ್ತ ರಾಜ್ಯಪಾಲರಿಗೆ ಪತ್ರ ಬರೆದು ರಾಜ್ಯಪಾಲರ ಹೆಸರಿಗೆ ಲಂಚದ ರೂಪವಾಗಿ ರೂ. 1,00,000-00 ಗಳ ಚೆಕ್ಕನ್ನು ಕಳುಹಿಸಿ ಇದನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ) ಇವರಿಗೆ ಸಂದಾಯ ಮಾಡಿ, ಶ್ರೀ ಜಯಂತ್‌ರವನ್ನು ಚಿಕ್ಕಮಗಳೂರಿನಿಂದ ಬೀದರ್‌ಗೆ ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿರುವುದಾಗಿ ಆರೋಪಿಸಿ, ತನ್ನ ವರ್ಗಾವಣೆಯನ್ನು ರದ್ದುಪಡಿಸುವಂತೆ ನಿರ್ದೇಶನ ನೀಡಬೇಕೆಂದು ಕೋರಿರುತ್ತಾರೆ.

ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಯವರು ದಿ: 17-9-2012ರ ಪತ್ರದಲ್ಲಿ ಶ್ರೀ ಜಯಂತ್ ರವರ ಈ ವರ್ತನೆಯನ್ನು ಗಂಭೀರವಾಗಿ ಪರಿಗಣಿಸಿ ಒಬ್ಬ ಜವಾಬ್ದಾರಿಯುತ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿರುವುದರಿಂದ ಇವರ ವಿರುದ್ಧ ಕೂಡಲೇ ಕ್ರಮ ವಹಿಸಬೇಕೆಂದು ಸೂಚಿಸಿರುತ್ತಾರೆ.

ಸರ್ಕಾರದ ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಇವರ ಪತ್ರ ಸಂ: ಇಡಿ:237:ಟಿಪಿಇ:2012, ದಿ: 29-9-2012 ರಲ್ಲಿ ಎಲ್ಲಾ ಅಂಶಗಳನ್ನು ಪರಿಶೀಲಿಸಿ 2011-12 ನೇ ಸಾಲಿನ ಸಾರ್ವತ್ರಿಕ ವರ್ಗಾವಣೆ ಪ್ರಸ್ತಾವನೆಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಹಂತದಲ್ಲಿ ನಡೆದ ವೃಂದ ನಿರ್ವಹಣಾ ಪ್ರಾಧಿಕಾರದ ಶಿಫಾರಸ್ಸಿನಂತೆಯೇ ಸರ್ಕಾರವು 119 ಸಿಬ್ಬಂದಿಗಳ ವರ್ಗಾವಣೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಯನ್ನು ಕಡತದಲ್ಲಿ ಪಡೆದು ಸಚಿವಾಲಯ ಕೈಪಿಡಿಯಂತೆ ಹಾಗೂ ಕರ್ನಾಟಕ ಸರ್ಕಾರಿ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977 ರನ್ವಯ ನಿಯಮಾನುಸಾರ ಅಧೀನ ಕಾರ್ಯದರ್ಶಿಯವರ ಸಹಿಯಲ್ಲಿ ಸಂಖ್ಯೆ: ಇಡಿ 148 ಟಿಪಿಇ 2011(5) ದಿನಾಂಕ: 14-7-2011 ರಂದು ವರ್ಗಾವಣೆ ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿದೆ. ಸದರಿ ವರ್ಗಾವಣೆ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರ ಹಂತದಲ್ಲಿ ನಡೆದ ವೃಂದ ನಿರ್ವಹಣಾ ಪ್ರಾಧಿಕಾರದ ಶಿಫಾರಸ್ಸಿನಂತೆಯೇ ಶ್ರೀ ಜಯಂತ್‌ರವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಲಾಗಿದೆಯೆಂದು ತಿಳಿಸಿರುತ್ತಾರೆ.

ಮುಂದುವರೆಸಿ ಶ್ರೀ ಜಯಂತ್‌ರವರು ಚಿಕ್ಕಮಗಳೂರಿಂದ ಬೀದರ್‌ಗೆ ವರ್ಗಾವಣೆ ಮಾಡಿರುವುದನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 4901/2011 ನ್ನು ಸಲ್ಲಿಸಿದ್ದು ಮಾನ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 30-1-2012 ರಂದು ನೀಡಿದ ನಿರ್ದೇಶನದಂತೆ ತಾಂತ್ರಿಕ ಶಿಕ್ಷಣ ನಿರ್ದೇಶಕರ ಹಂತದಲ್ಲಿ ಸದರಿಯವರನ್ನು ಬೀದರ್‌ನಿಂದ ಸರ್ಕಾರಿ ಎಲ್.ವಿ.ಪಾಲಿಟೆಕ್ನಿಕ್, ಹಾಸನ ಇಲ್ಲಿಗೆ ವರ್ಗಾವಣೆ ಮಾಡಲಾಗಿದೆ. ಆದಾಗ್ಯೂ ಸದರಿಯವರು ಸುಳ್ಳು ಆರೋಪಗಳನ್ನು ಮಾಡಿ ತನ್ನ ವರ್ಗಾವಣೆಯನ್ನು ಪರಿಗಣಿಸಿಲ್ಲವೆಂದು ಮಾನ್ಯ ರಾಜ್ಯಪಾಲರಿಗೆ ತಪ್ಪು ಮಾಹಿತಿಯನ್ನು ನೀಡಿ ಒಬ್ಬ ಜವಾಬ್ದಾರಿಯುತ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿಯುತ್ತಾರೆಂದು ಪತ್ರದಲ್ಲಿ ತಿಳಿಸಿಯುತ್ತಾರೆ.

ಶ್ರೀ ಜಯಂತ್ ರವರು ಮೇಲಾಧಿಕಾರಿಗಳ ವಿರುದ್ಧ ರಾಜ್ಯಪಾಲರಿಗೆ, ಸಚಿವರಿಗೆ, ಡಿ.ಪಿ.ಎ.ಆರ್ ಗೆ, ಲೋಕಾಯುಕ್ತಕ್ಕೆ ಹೀಗೆ ಎಲ್ಲಾ ಕಡೆಗಳಲ್ಲಿಯೂ ಆಧಾರ ರಹಿತ ಹಾಗೂ ಇಲ್ಲಸಲ್ಲದ ಆರೋಪಗಳನ್ನು ಮಾಡುವ, ಪತ್ರ ಬರೆಯುವ ಮೂಲಕ ಪರಿಪಾಠ ಹೊಂದಿರುವುದು ಸರ್ಕಾರಿ ನೌಕನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಬಂದಿರುವುದೂ ಸಹ ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಸದರಿಯವರ ಮೇಲಿನ ಆರೋಪವನ್ನು ಅವಗಾಹನಿಸಿದಾಗ ಅವರ ವರ್ತನೆಯು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿರುವುದು ಮತ್ತು ಕರ್ತವ್ಯದಲ್ಲಿ ಪ್ರಾಮಾಣಿಕತೆ, ಸತ್ಯ, ನಿಷ್ಠೆ ತೋರಿಸುವುದರಲ್ಲಿ ವಿಫಲರಾಗಿ ಮೇಲಧಿಕಾರಿಗಳಿಗೆ ಅಗೌರವ ತೋರಿಸಿ ಕರ್ತವ್ಯ ಚ್ಯುತಿ ಎಸಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3(1)ನ್ನು ಉಲ್ಲಂಘಿಸಿದ ಆರೋಪಕ್ಕೆ ಒಳಗಾಗಿರುತ್ತಾರೆ. ಸರ್ಕಾರವು ಇವರ ದುರ್ನಡತೆಯನ್ನು ಗಂಭೀರವಾಗಿ ಪರಿಗಣಿಸಿ ಶ್ರೀ ಜಯಂತ್ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ತೀರ್ಮಾನಿಸಿ ಈ ರೀತಿಯ ಅನುಚಿತ ವರ್ತನೆಯು ಗಂಭೀರ ಸ್ವರೂಪದ ದುರ್ನಡತೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಸದರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ 10(1) (ಡಿ)ರ ಅಡಿಯಲ್ಲಿ ಕೂಡಲೇ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲು ಕ್ರಮಕೈಗೊಳ್ಳುವಂತೆ ದಿನಾಂಕ: 29-9-2012 ರ ಸರ್ಕಾರದ ಪತ್ರದಲ್ಲಿ, ಸರ್ಕಾರದ ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರು ನಿರ್ದೇಶಿಸಿರುತ್ತಾರೆ. ಆದ್ದರಿಂದ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ ಸಂಖ್ಯೆ: ಡಿಟಿಇ 08 ಡಿಇಕ್ಯೂ(1) 2011, ದಿನಾಂಕ: 04-10-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರಿ ಶ್ರೀಮತಿ ಎಲ್.ವಿ. ಪಾಲಿಟೆಕ್ನಿಕ್, ಹಾಸನದಲ್ಲಿ ಬೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಿ.ವಿ.ಜಯಂತ್, ಇವರು ಘನತೆವೆತ್ತ ರಾಜ್ಯಪಾಲರಿಗೆ ದಿನಾಂಕ: 14-9-2012 ರಂದು ಪತ್ರ ಬರೆದು ರಾಜ್ಯಪಾಲರ ಹೆಸರಿಗೆ ಲಂಚದ ರೂಪವಾಗಿ ರೂ. 1,00,000-00 ಗಳ ಚೆಕ್ಕನ್ನು ಕಳುಹಿಸಿ ಇದನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ) ಇವರಿಗೆ ಸಂದಾಯ ಮಾಡಿ, ಶ್ರೀ ಜಯಂತ್‌ರವನ್ನು ಚಿಕ್ಕಮಗಳೂರಿನಿಂದ ಬೀದರ್‌ಗೆ ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿರುವುದಾಗಿ ಆರೋಪಿಸಿ, ತನ್ನ ವರ್ಗಾವಣೆಯನ್ನು ರದ್ದುಪಡಿಸುವಂತೆ ಕೋರಲಾಗಿದ್ದು ಘನತೆವೆತ್ತ ರಾಜ್ಯಪಾಲರ ಹೆಸರಿಗೆ ಲಂಚದ ರೂಪವಾಗಿ ರೂ. 1,00,000-00 ಗಳ ಚೆಕ್ಕನ್ನು ಕಳುಹಿಸಿ ಮೇಲಾಧಿಕಾರಿಗಳೊಂದಿಗೆ ಅಸಭ್ಯವಾಗಿ ವರ್ತಿಸುತ್ತಾ ಒಬ್ಬ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ [ನಡತೆ] ನಿಯಮಾವಳಿ 1966 ರ ನಿಯಮ 3(1)ರ ಉಪನಿಯಮ (i) (ii) ಮತ್ತು (iii) ನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಮತ್ತು ನಿರ್ಲಕ್ಷತೆ ತೋರಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಅವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಶ್ರೀ ಬಿ.ವಿ.ಜಯಂತ್, ಬೋಧಕರು, ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ಮತ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ 10(1) (ಡಿ) ಅನ್ವಯ ಈ ತಕ್ಷಣದಿಂದಲೇ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಿದೆ.

ಸದರಿಯವರು ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಸದರಿಯವರು ಇಲಾಖೆಯ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ನಿರ್ದೇಶಕರು
ಹಾಗೂ ಶಿಸ್ತು ಪ್ರಾಧಿಕಾರ
ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

ಇವರಿಗೆ,

1. ಶ್ರೀ ಬಿ.ವಿ.ಜಯಂತ್, ಬೋಧಕರು, ಆಶೀರ್, #171, ರತ್ನಗಿರಿ ರೋಡ್, ಚಿಕ್ಕಮಗಳೂರು
2. ಶ್ರೀ ಬಿ.ವಿ.ಜಯಂತ್, ಬೋಧಕರು, ಸರ್ಕಾರಿ ಶ್ರೀಮತಿ ಎಲ್.ವಿ. ಪಾಲಿಟೆಕ್ನಿಕ್, ಹಾಸನ (ಪ್ರಿನ್ಸಿಪಾಲರ ಮುಖಾಂತರ)

**ಪ್ರತಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:-**

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಯವರು, ರಾಜಭವನ, ಬೆಂಗಳೂರು
2. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು

3. ಆಪ್ತ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು
4. ಮಾಧ್ಯಮ ಸಲಹೆಗಾರರು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು
5. ಪ್ರಿನ್ಸಿಪಾಲರು, ಸರ್ಕಾರಿ ಶ್ರೀಮತಿ ಎಲ್.ವಿ.ಪಾಲಿಟೆಕ್ನಿಕ್, ಹಾಸನ (ಸದರಿಯವರನ್ನು ತಕ್ಷಣದಿಂದ ವಿಮುಕ್ತಿಗೊಳಿಸಿ ವರದಿ ಕಳುಹಿಸುವ ಸಲುವಾಗಿ).
6. ಖಜಾನಾಧಿಕಾರಿ, ಜಿಲ್ಲಾ ಖಜಾನೆ, ಹಾಸನ.
7. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8. ಇಎಸ್‌ಟಿ(3), (9), (7), ಕಾನೂನು ಘಟಕ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
9. ಕಛೇರಿ ಪ್ರತಿ.